– ಹೀಗೆ ಬೇಂದ್ರೆಯವರ ಅನೇಕ ಮುಖ್ಯ ಕವಿತೆಗಳಿಗೆ ಅರ್ಥವಿವೇಚನೆ ಇಲ್ಲಿದೆ. ಹಾಗೆಂದು ಬೇಂದ್ರೆಯವರ ಎಲ್ಲ ಮುಖ್ಯ ಕವಿತೆಗಳು ಕಾವ್ಯರಸಿಕರಿಗೆ ಇಲ್ಲಿ ಸಿಗುವುದಿಲ್ಲ. ಕುರ್ತಕೋಟಿ ಮತ್ತು ವಾಮನ ಬೇಂದ್ರೆಯವರ ಟಿಪ್ಪಣಿಗಳು ಕವಿತೆಯ ಸಂದರ್ಭ, ಭಾವ ಸೂಚಿ, ಅದರ ಮಹತ್ವ, ಅದಕ್ಕಿರುವ ಅರ್ಥದ ಪದರುಗಳನ್ನು ಬಿಚ್ಚಿಡುತ್ತವೆ. ಇವು ಓದುಗರಿಗೆ ಕಾವ್ಯದ ಓದಿನ ಪ್ರಾಥಮಿಕ ಸಿದ್ಧತೆಗೆ, ಕವಿತೆಯ ಪ್ರವೇಶಕ್ಕೆ ಅನುವು ಮಾಡಿಕೊಡುತ್ತವೆ. ಕವಿತೆಯ ಓದು ಮತ್ತು ನಂತರ ಅರ್ಥವಿವರಣೆ ಜೊತೆಗೇ ಸಾಗುವುದರಿಂದ ಸಹಜವಾಗಿಯೇ ಕವಿತೆಯ ಸೂಚಿತ ಅರ್ಥಕ್ಕಿಂತ ಬೇರೆಯದಾದ ಹೊಳಹು, ಧ್ವನಿಗಳು ಹೊರಡುವಂತೆ ಈ ಟಿಪ್ಪಣಿಗಳಿವೆ. ಅವು ಓದುಗರ ತಿಳಿವನ್ನು, ಕವಿತೆಯ ಆಳವನ್ನು ಕಾಣಿಸುವುದರ ಕಡೆಗೂ ಲಕ್ಷ್ಯಕೊಟ್ಟಿವೆ. ಕಾವ್ಯದ ನಾದದ ನವನೀತದ ಜೊತೆಗೆ ಅರ್ಥದ ನವನೀತವೂ ಸಿಗುವಂತೆ ಈ ಟಿಪ್ಪಣಿಗಳಿವೆ. ಇವನ್ನು ಬೇಂದ್ರೆ ಕವಿತೆಗಳ ಪ್ರವೇಶಕ್ಕೆಂದು ರೂಪಿಸಿದ ಟಿಪ್ಪಣಿಗಳೆಂದು ಮಾತ್ರ ಓದಬೇಕಿಲ್ಲ. ಇವು ಕನ್ನಡದ ಯಾವುದೇ ಕವಿತೆಯ ಪ್ರವೇಶಗಳೂ ಕೂಡ. ಇಲ್ಲಿ ಇರುವ ಕವಿತೆಗಳು ಕನ್ನಡದ ಬಹುಮುಖ್ಯ ಕವಿತೆಗಳೂ ಆಗಿರುವುದರಿಂದ ಕನ್ನಡ ನವೋದಯ ಕಾವ್ಯದ ಮುಖ್ಯಘಟ್ಟವನ್ನೇ ಇಲ್ಲಿನ ಟಿಪ್ಪಣಿಗಳು ಸೂಚಿಸುತ್ತಿವೆ, ವಿವರಿಸುತ್ತಲೂ ಇವೆ ಎನ್ನಬಹುದು. ಸಾಹಿತ್ಯದ ಹೊಸ ಓದುಗರಿಗೆ ಬೇಂದ್ರೆ ಇನ್ನಷ್ಟು ಹತ್ತಿರವಾಗಲು 'ಶ್ರಾವಣ ಪ್ರತಿಭೆ' ಸಾಕಷ್ಟು ಸಹಾಯ ಮಾಡಬಲ್ಲದು.

'ಶ್ರಾವಣ ಪ್ರತಿಭೆ'ಯ ಮಹತ್ವ ಇರುವುದು ಬೇಂದ್ರೆ ಕವಿತೆಗಳಿಗೆ ಸರಳ ಮತ್ತು ಸುಲಭವಾಗಿ ಅರ್ಥವಿವರಣೆ, ವ್ಯಾಖ್ಯಾನಗಳನ್ನು ಕೊಡುತ್ತದೆ ಎಂಬುದರಲ್ಲಿ ಅಲ್ಲ. ಅದು ಕನ್ನಡದ ಮುಖ್ಯ ವಿಮರ್ಶಕರಾದ, ಅದರಲ್ಲೂ ಬೇಂದ್ರೆ ಕಾವ್ಯದ ವಿಮರ್ಶಕರಾದ ಕುರ್ತಕೋಟಿಯವರು ಬೇಂದ್ರೆಯವರ ಕಾವ್ಯಕ್ಕೆ ಯಾವರೀತಿಯಲ್ಲಿ ಪ್ರತಿಸ್ಪಂದಿಸಿದ್ದಾರೆ ಎನ್ನುವುದರಲ್ಲಿ ಕೂಡ ಇದೆ. ಒಂದು ರೀತಿಯಲ್ಲಿ ಕುರ್ತಕೋಟಿಯವರು ಬೇಂದ್ರೆ ಕಾವ್ಯದ ಅಧಿಕೃತ ಮತ್ತು ಸಹೃದಯಿ ವಿಮರ್ಶಕರಾಗಿದ್ದರು. ಬೇಂದ್ರೆಯವರ ಸಮಕಾಲೀನರಾದ ಕುರ್ತಕೋಟಿ ಅವರ ವಿಮರ್ಶೆಗಳಿಲ್ಲದೆ ಬೇಂದ್ರೆ ಕಾವ್ಯವನ್ನು ಪೂರ್ತಿಯಾಗಿ ತಿಳಿದುಕೊಳ್ಳುವುದು ಕೂಡ ಕಷ್ಟವೇ. ಕುರ್ತಕೋಟಿಯವರ ವಿಮರ್ಶೆ ಬೇಂದ್ರೆ ಕಾವ್ಯಕ್ಕೆ ಕಾಲಕಾಲಕ್ಕೆ ಮಿಡಿಯುತ್ತ, ಪ್ರತಿಸ್ಪಂದಿಸುತ್ತ, ವ್ಯಾಖ್ಯಾನಿಸುತ್ತಲೂ ಬಂದಿತ್ತು. ಒಂದು ಅರ್ಥದಲ್ಲಿ ಕುರ್ತುಕೋಟಿಯವರ ವಿಮರ್ಶಾ ಪ್ರತಿಭೆ ಬೇಂದ್ರೆ ಕಾವ್ಯದ ಪ್ರಭೆಗೆ ತೀರ ಸನಿಹದ್ದಾಗಿತ್ತು, ಸಮಾನವಾಗಿತ್ತು; ಆ ಪ್ರಭೆಯನ್ನು ಹಲವು ದಿಕ್ಕುಗಳಲ್ಲಿ ಪ್ರತಿಫಲಿಸಬಲ್ಲ ಪ್ರತಿಭೆಯೂ ಆಗಿತ್ತು ಎನ್ನುವುದನ್ನು ಕನ್ನಡ ವಿಮರ್ಶೆ ಮರೆಯುವಂತಿಲ್ಲ.ಇದು ಬೇಂದ್ರೆ ಕಾವ್ಯದ ಅದೃಷ್ಟ ಮಾತ್ರವಲ್ಲ, ಕನ್ನಡ ಭಾಷೆಯ ಸೌಭಾಗ್ಯವೂ ಹೌದು. ಆದ್ದರಿಂದ ಇದಕ್ಕೆ ಒಂದು ಚಾರಿತ್ರಿಕ ಸ್ಥಾನವೂ ಇದೆ.

ಕನ್ನಡ ಸಾಹಿತ್ಯದಲ್ಲಿ ಕವಿ–ಕಾವ್ಯವನ್ನು ವಾಚಕರ ಹತ್ತಿರಕ್ಕೆ ತರುವ 'ಶ್ರಾವಣ ಪ್ರತಿಭೆ'ಯ ಮಟ್ಟದ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಬರಲಿಲ್ಲ. ಇದು 'ಶ್ರಾವಣ ಪ್ರತಿಭೆ'ಯ ಮಹತ್ವವನ್ನು ಸೂಚಿಸುತ್ತಿರುವಂತೆಯೇ ಈ ಕ್ಷೇತ್ರದಲ್ಲಿ ಆಗಬೇಕಿರುವ ಕೆಲಸವನ್ನೂ ಹೇಳುವಂತಿದೆ.